ಬೀದರ್ ಜಿಲ್ಲೆಯಲ್ಲಿ ಹಾಲಿನ ಪುಡಿ ಘಟಕ ಪ್ರಾರಂಭ

114 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈಗ ಎಲ್ಲೆಲ್ಲಿ ಹಾಲಿನ ಪುಡಿ ಘಟಕಗಳು, ಹಾಲಿನ ಉತ್ಪನ್ನಗಳ ಘಟಕಗಳು ಹಾಗೂ ಪಶು ಆಹಾರ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ; (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು).

ಆ) ಈ ಮೇಲ್ಕಂಡ ಘಟಕಗಳನ್ನು ಹೊಸದಾಗಿ ಎಲ್ಲೆಲ್ಲಿ ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆ;

ಇ) ಹಿಂದುಳಿದ ಜಿಲ್ಲೆಯಾದ ಬೀದರ್ನಲ್ಲಿ ಹಾಲಿನ ಪುಡಿ ಘಟಕ, ಹಾಲಿನ ಉತ್ಪನ್ನಗಳ ಘಟಕ ಹಾಗೂ ಪಶು ಆಹಾರ ತಯಾರಿಕಾ ಘಟಕಗಳನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದೇ;

ಈ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):

ಅ) ವಿವರಗಳು ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಒಕ್ಕೂಟದ ಹೆಸರು	ಡೈರಿ	ಉತ್ಪನ್ನ ಘಟಕ	ಪಶುಆಹಾರ ಘಟಕಗಳು
1.	ಬೆಂಗಳೂರು	ಅ) ಬೆಂಗಳೂರು ಆ) ಮದರ್ ಡೈರಿ	-	ರಾಜಾನುಕುಂಟೆ
2.	ಮೈಸೂರು	ಮೈಸೂರು	-	-
3.	ಮಂಡ್ಯ	ಮಂಡ್ಯ	ಗೆಜ್ಜಲಗೆರೆ	-
4.	ತುಮಕೂರು	ತುಮಕೂರು	-	-
5.	ಹಾಸನ	ಅ) ಹಾಸನ ಆ) ಕೂಡಿಗೆ	-	-
6.	ಧಾರವಾಡ	ಧಾರವಾಡ	ಧಾರವಾಡ	ರಾಯಪುರ
7.	ಬೆಳಗಾಂ	ಬೆಳಗಾಂ	-	-
8.	ಬಿಜಾಪುರ	ಬಾಗಲಕೋಟೆ	-	-
9.	ಗುಲ್ಬರ್ಗಾ	ಗುಲ್ಬರ್ಗಾ	-	-
10.	ದಕ್ಷಿಣ ಕನ್ನಡ	ಅ) ಮಣಿಪಾಲ್ ಆ) ಮಂಗಳೂರು	- -	- -
11.	ಶಿವಮೊಗ್ಗ	ಶಿವಮೊಗ್ಗ	-	-
12.	ರಾಯಚೂರು ಬಳ್ಳಾರಿ	ಬಳ್ಳಾರಿ	-	-

ಆ) 20 ಎಂ.ಟಿ.ಡಿ. ಸಾಮರ್ಥ್ಯವುಳ್ಳ ಒಂದು ಹಾಲಿನ ಪುಡಿ ಘಟಕ ಹಾಗೂ ಎರಡು 100 ಎಂ.ಟಿ.ಡಿ. ಸಾಮರ್ಥ್ಯವುಳ್ಳ ಉತ್ಪನ್ನ ಘಟಕಗಳನ್ನು ಹೊಸದಾಗಿ ಸ್ಥಾಪಿಸಲು ಉದ್ದೇಶಿಸಿದ್ದು ಇವುಗಳಿಗೆ ಸ್ಥಳವನ್ನು ಇನ್ನೂ ನಿರ್ಧರಿಸಬೇಕಾಗಿರುತ್ತದೆ.

ಇ) ಬೀದರ್ನಲ್ಲಿ ಹಾಲಿನ ಪುಡಿ ಘಟಕ ಮತ್ತು ಪಶು ಆಹಾರ ಘಟಕಗಳನ್ನು ಸ್ಥಾಪನೆ ಮಾಡುವ ಪ್ರಸ್ತಾವನೆಯು ಸದ್ಯಕ್ಕೆ ಇರುವುದಿಲ್ಲ.

ಈ ಜಿಲ್ಲೆಯಿಂದ ಶೇಖರಣೆಯಾಗುತ್ತಿರುವ ಹಾಲಿಗೆ ಮಾರುಕಟ್ಟೆ ಇರುವುದರಿಂದ ಮತ್ತು ಹೆಚ್ಚುವರಿ ಹಾಲಿದ್ದರೆ ಅದರ ಪರಿವರ್ತನೆಗಾಗಿ ನೆರೆಯ ಜಿಲ್ಲೆಗಳಲ್ಲಿ ಪರಿವರ್ತನಾ ಸೌಲಭ್ಯವಿರುವುದರಿಂದ ಪಶು ಆಹಾರ ಬೇಡಿಕೆಯನ್ನು ಹಾಲು ಇರುವ ಕಾರ್ಖಾನೆಗಳಿಂದ ಪೂರೈಕೆಯಾಗುತ್ತಿರುವುದರಿಂದ.

ಅರಣ್ಯ ಪ್ರದೇಶದಲ್ಲಿ ತೆಗೆಯುತ್ತಿರುವ ಗ್ರಾನೈಟ್ ಕಲ್ಲಿನ ಬಗ್ಗೆ

2ಎ - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಣ್ಯ ಪ್ರದೇಶದಲ್ಲಿ ತೆಗೆಯುತ್ತಿರುವ ಗ್ರಾನೈಟ್ ಕಲ್ಲಿನ ಕೆಲಸವನ್ನು ನಿಲ್ಲಿಸಲಾಗಿದೆಯೇ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):

ಅ) ಹೌದು.

ಉಳ್ಳಾಲ ಮತ್ತು ಬೆಂಗ್ರೆಯ ಮಂಗಳೂರು ಬಂದರು ಅಲಿ ತದೆಗೋಡೆಯ ಕೆಲಸ ಕುರಿತು

37 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ): ಮಾನ್ಯ ಬಂದರು ಮತ್ತು ಮಿನುಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗ್ರೆ ಮತ್ತು ಉಳ್ಳಾಲದಲ್ಲಿ ಮಂಗಳೂರು ಬಂದರು ಅಲೆತಡೆಗೋಡೆ (ಬ್ರೇಕ್‌ವಾಟರ್) ಕೆಲಸ ತುಂಬಾ ನಿಧಾನವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಆ ಕೆಲಸ ಪೂರೈಕೆ ಯಾವಾಗ ಮಾಡಲಾಗುವುದು?

ಇ) ಈಗ ಎಲ್ಲಿಯವರೆಗೆ ಈ ಕೆಲಸವಾಗಿರುತ್ತದೆ.

ಈ) ಈವರೆಗೆ ಎಷ್ಟು ಹಣ ಖರ್ಚಾಗಿದೆ ಹಾಗೂ ಅದರ ಪೂರೈಕೆಗೆ ಬೇಕಾಗುವ ಹಣವೆಷ್ಟು.

ಶ್ರೀ ವಸಂತ ವಿ. ಸಾಲಿಯಾನ (ಬಂದರು ಮತ್ತು ಮೀನುಗಾರಿಕೆ ರಾಜ್ಯ ಸಚಿವರು):

ಅ) ಹೌದು

ಆ) ಡಿಸೆಂಬರ್ 1994ರ ಸಮಯಕ್ಕೆ

ಇ) ದಕ್ಷಿಣ 405 ಮೀಟರ್ ಮತ್ತು ಉತ್ತರ 375 ಮೀಟರ್ (ಅರ್ಧೋಕ್ತವಚ ಎಲ್ಲಿದೆ)

ಈ) ಈವರೆಗೆ ರೂ.280 ಲಕ್ಷ ಖರ್ಚಾಗಿದೆ. ಇನ್ನೂ ರೂ.120.00 ಲಕ್ಷ ಬೇಕಾಗುತ್ತದೆ.

ಚನ್ನಪಟ್ಟಣ ಸಾರ್ವಜನಿಕ ಆಸ್ಪತ್ರೆ

82 - ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಚನ್ನಪಟ್ಟಣ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯನ್ನು 100 ಹಾಸಿಗೆಗಳಿಂದ 200 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸುವ ಬಗ್ಗೆ ಭರವಸೆ ನೀಡಿದ್ದು ನಿಜವೇ?

ಆ) ಹಾಗಿದ್ದರೆ ಈ ವಿಷಯದ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?